# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 817 (950)

ಸದಸ್ಯರ ಹೆಸರು : ಶ್ರೀ ಆರ್. ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 20.09.2021

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬಿ.ಬಿ.ಎಂ.ಪಿ. ನಗರಸಭೆ, ಪಟ್ಟಣ ಪಂಚಾಯತಿ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕಂದಾಯ ಕಟ್ಟುವಾಗ ಗ್ರಂಥಾಲಯ ಕರ 6% ಸರ್ಕಾರ ಪಡೆಯುತ್ತಿದೆಯೇ? ಈ ಕರವನ್ನು ಗ್ರಂಥಾಲಯ ಅಭಿವೃದ್ಧಿಗೆ ಉಪಯೋಗಿಸಲಾಗುತ್ತಿದೆಯೇ? (ವಿವರ ನೀಡುವುದು) | ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವಿವಿಧ ಜಿಲ್ಲಾ / ನಗರ ಕೇಂದ್ರ ಗ್ರಂಥಾಲಯ ಪ್ರಾಧಿಕಾರಗಳು 1965 ರ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಅಧಿನಿಯಮ 30 ರನ್ವಯ ವಿವಿಧ ಸ್ಥಳೀಯ ಸಂಸ್ಥೆಗಳಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹಾನಗರ ಪಾಲಿಕೆ, ನಗರ ಪಾಲಿಕೆಗಳು, ಪುರಸಭೆ, ಪಟ್ಟಣ ಪಂಚಾಯತಿಗಳು ಹಾಗೂ ಗ್ರಾಮ ಪಂಚಾಯತಿಗಳು ಸಂಗ್ರಹಿಸುವ ಆಸ್ತಿ ತೆರಿಗೆಯ ಮೇಲೆ ಶೇ.6 ರಷ್ಟು ಗ್ರಂಥಾಲಯ ಉಪಕರವನ್ನು ಸಂಗ್ರಹಿಸಿ ಸಂಗ್ರಹಣಾ ವೆಚ್ಚವಾಗಿ ಸಂಗ್ರಹಿಸಲಾದ ಕರದ ಮೇಲೆ ಶೇ.10 ರಷ್ಟು ಸಂಗ್ರಹಣಾ ವೆಚ್ಚವನ್ನು ಸ್ಥಳೀಯ ಸಂಸ್ಥೆಗಳು ಮುರಿದುಕೊಂಡು ಉಳಿದ ಮೊತ್ತವನ್ನು ಗ್ರಂಥಾಲಯಕ್ಕೆ ಪಾವತಿಸಬೇಕಾಗಿರುತ್ತದೆ. ಹೀಗೆ ಪಾವತಿಸಲಾದ ಮೊತ್ತವನ್ನು ಆಯಾಯಾ ಜಿಲ್ಲಾ / ನಗರ ಕೇಂದ್ರ ಗ್ರಂಥಾಲಯಗಳು ಅಭಿವೃದ್ಧಿಗೆ ಉಪಯೋಗಿಸಿಕೊಳ್ಳಲಾಗುತ್ತಿದೆ.<br><br>ಇಲಾಖೆಯು ಸ್ವೀಕರಿಸಲಾಗುವ ಗ್ರಂಥಾಲಯ ಕರದ ಮೊತ್ತವನ್ನು ಗ್ರಂಥಾಲಯ ಅಭಿವೃದ್ಧಿ ಚಟುವಟಿಕೆಗಳಿಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಲೆಕ್ಕ ಪತ್ರ ನಿಯಮಗಳು 1975 ರ ನಿಯಮ 30 ರನ್ವಯ ಆಯ-ವ್ಯಯ ಸಿದ್ಧಪಡಿಸಿಕೊಂಡು ಗ್ರಂಥಾಲಯ ಪ್ರಾಧಿಕಾರಕ್ಕೆ ವಹಿಸಲಾದ ಕರ್ತವ್ಯಗಳನ್ನು ಪೂರೈಸುವದಕ್ಕಾಗಿ ಅಗತ್ಯಪಡಿಸಿದಂತಹ ಸೇವೆಗಳಿಗಾಗಿ ವಿವಿಧ ಲೆಕ್ಕಶೀರ್ಷಿಗಳಿಗೆ ಸೂಕ್ತ ಆರ್ಥಿಕ ಏರ್ಪಾಟನ್ನು ಮಾಡಿಕೊಂಡು ವೆಚ್ಚಗಳನ್ನು ಭರಿಸಲು ನಿಯಮ 47 ರ ತಿದ್ದುಪಡಿಯಂತೆ ಶೇಕಡವಾರು ಪ್ರಮಾಣವನ್ನು ಆರ್ಥಿಕ ವರ್ಷದಲ್ಲಿ ಸ್ವೀಕರಿಸಲಾಗುವ ಗ್ರಂಥಾಲಯ ಕರಕ್ಕೆ ಅನುಗುಣವಾಗಿ ಸಾಮಾನ್ಯ ಆಡಳಿತಕ್ಕೆ ಶೇ. 20, ಗ್ರಂಥಗಳು ಮತ್ತು ಉಪಕರಣಗಳು ಶೇ.60, ಗ್ರಂಥಾಲಯ ನಿರ್ವಹಣೆ ಶೇ.10, ಲೋಕೋಪಯೋಗಿ ಕಾರ್ಯ ಶೇ.5 ಹಾಗೂ ಇತರೆ ವೆಚ್ಚಕ್ಕಾಗಿ ಶೇ.5 ರಂತೆ ನಿಗದಿಪಡಿಸಿಕೊಂಡು ಒಟ್ಟು ಮೊತ್ತವನ್ನು ಉಪಯೋಗಿಸಲಾಗುತ್ತಿದೆ. ಇಲಾಖೆಯು ಸ್ವೀಕರಿಸಲಾಗುವ ಗ್ರಂಥಾಲಯ ಕರದ ಮೊತ್ತವನ್ನು ಗ್ರಂಥಾಲಯ ಅಭಿವೃದ್ಧಿ ಚಟುವಟಿಕೆ ಕಾರ್ಯಗಳಿಗಲ್ಲದೆ ಬೇರೆ ಕೆಲಸಗಳಿಗೆ ಉಪಯೋಗಿಸುತ್ತಿರುವುದಿಲ್ಲ.<br><br>ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಲಾದ ಗ್ರಂಥಾಲಯ ಕರವನ್ನು ಸಂಬಂಧಿಸಿದ ಜಿಲ್ಲಾ/ನಗರ ಕೇಂದ್ರ |

| | | |
|---|---|---|
| | | ಗ್ರಂಥಾಲಯಗಳಿಗೆ ನೀಡದೆ ಬಾಕಿ ಉಳಿಸಿಕೊಂಡಿರುವ ಮೊತ್ತವು ದಿನಾಂಕ: 31-03-2021 ರ ಅಂತ್ಯಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ.513.54 ಕೋಟಿ ಹಾಗೂ ಸ್ಥಳೀಯ ಸಂಸ್ಥೆಗಳಿಂದ ರೂ.51.55 ಕೋಟಿ ಒಟ್ಟಾರೆ ರೂ. 565.09 ಕೋಟಿ ಬಾಕಿ ಉಳಿದಿರುತ್ತವೆ.<br><br>ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಆದೇಶ ಸಂ: ನಇ 441 ಜಿಇಎಲ್ 2014, ದಿ: 16-03-2021 ರಲ್ಲಿ ಬಾಕಿ ಉಳಿದಿರುವ ಗ್ರಂಥಾಲಯ ಕರವನ್ನು ಗ್ರಂಥಾಲಯಗಳಿಗೆ ಉಪಯೋಗಿಸಲು ನೀಡುವಂತೆ ಪ್ರತಿ ಆರ್ಥಿಕ ವರ್ಷ ಶೇ.25% ನಂತೆ ನಾಲ್ಕು ವರ್ಷಗಳಲ್ಲಿ ಬಾಕಿ ಮೊತ್ತ ಸಂದಾಯ ಮಾಡಲು ಆದೇಶಿಸಿರುತ್ತದೆ ಹಾಗೂ ಪ್ರತಿ ಸ್ಥಳೀಯ ಸಂಸ್ಥೆಯು ESCROW ಖಾತೆಯನ್ನು ತೆರೆದು ಗ್ರಂಥಾಲಯ ಕರವನ್ನು ಪಾವತಿಸಲು ಆದೇಶಿಸಿರುತ್ತದೆ.<br><br>ಗ್ರಾಮ ಪಂಚಾಯತಿ ಕೇಂದ್ರ ಸ್ಥಾನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಗ್ರಾಮ ಪಂಚಾಯತಿ ಗ್ರಂಥಾಲಯಗಳನ್ನು ಸರ್ಕಾರದ ಆದೇಶ ಸಂ: ಇಡಿ 64 ಎಲ್ ಐಬಿ 2015 ದಿನಾಂಕ: 26-02-2019 ಮತ್ತು 24-07-2019 ಗಳನ್ವಯ 5633 ಗ್ರಂಥಾಲಯಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಹಸ್ತಾಂತರಿಸಲಾಗಿದ್ದು, ಸದರಿ ಗ್ರಂಥಾಲಯಗಳು ಸಧ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ ಹಾಗೂ ಗ್ರಾಮ ಪಂಚಾಯತಿಗಳು ಸಂಗ್ರಹಿಸುತ್ತಿರುವ ಗ್ರಂಥಾಲಯ ಕರವನ್ನು ಆಯಾ ಗ್ರಾಮ ಪಂಚಾಯತಿಗಳೇ ಗ್ರಂಥಾಲಯ ಅಭಿವೃದ್ಧಿಗಾಗಿ ಬಳಸಲಾಗುತ್ತಿದೆ. 2019 ರವರೆಗೆ ವಿವಿಧ ಗ್ರಾಮ ಪಂಚಾಯತಿಗಳಿಂದ ಬಾಕಿ ಉಳಿಸಿಕೊಳ್ಳಲಾದ ಗ್ರಂಥಾಲಯ ಕರವನ್ನು ಸಹ ಆಯಾ ಗ್ರಾಮ ಪಂಚಾಯತಿಗಳು ಗ್ರಂಥಾಲಯ ಅಭಿವೃದ್ಧಿಗಾಗಿ ಬಳಸಿಕೊಳ್ಳುವಂತೆ ಸರ್ಕಾರದ ಆದೇಶ ಸಂ: ಇಡಿ 64 ಎಲ್ ಐಬಿ 2015 ಬೆಂಗಳೂರು ದಿನಾಂಕ: 26-02-2019 ರನ್ವಯ ಗ್ರಾಮ ಪಂಚಾಯತಿಗಳೇ ಬಳಸಿಕೊಳ್ಳುತ್ತಿವೆ. |
| ಆ) | ಇಲ್ಲವಾದಲ್ಲಿ, ಬೇರೆ ಕೆಲಸಗಳಿಗೆ ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಗ್ರಂಥಾಲಯ ಕರವನ್ನು ಗ್ರಂಥಾಲಯಗಳಿಗೆ ಉಪಯೋಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? (ವಿವರ ನೀಡುವುದು) | ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಪಾವತಿಸಲಾದ ಗ್ರಂಥಾಲಯ ಕರದ ಮೊತ್ತವನ್ನು ಸಾರ್ವಜನಿಕ ಗ್ರಂಥಾಲಯ ಅಭಿವೃದ್ಧಿ ಚಟುವಟಿಕೆ ಕಾರ್ಯಗಳಿಗೆ ಮಾತ್ರ ಉಪಯೋಗಿಸಲಾಗುತ್ತಿದೆ.<br><br>ನಿರ್ದಿಷ್ಟಪಡಿಸಲಾದ ಅವಧಿಯೊಳಗಾಗಿ ಗ್ರಂಥಾಲಯ ಉಪಕರವನ್ನು ಪಾವತಿಸಲು ವಿಫಲವಾದಲ್ಲಿ ಅಥವಾ ಹಣ ರವಾನಿಸಲು ವಿಳಂಬ ಮಾಡಿದಲ್ಲಿ ಆರ್ಥಿಕ ಇಲಾಖೆಯು ಸ್ಥಳೀಯ ಪ್ರಾಧಿಕಾಗಳ ಎಸ್.ಎಫ್.ಸಿ ಅನುದಾನದ ಮೊತ್ತದಿಂದ ನೇರವಾಗಿ ಕಡತಗೊಳಿಸಿ, ಸಂಬಂಧಪಟ್ಟ ನಗರ ಗ್ರಂಥಾಲಯ ಪ್ರಾಧಿಕಾರ ಅಥವಾ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಬಿಡುಗಡೆಗೊಳಿಸುವ ಬಗ್ಗೆ ಕರ್ನಾಟಕ ಗ್ರಂಥಾಲಯ ಇಲಾಖೆಯ ಕಾಯ್ದೆ 1965ರ ಕಲಂ 30 ಕ್ಕೆ ತಿದ್ದುಪಡಿ ತರುವ ಸಂಬಂಧದಲ್ಲಿ |

| | | |
|---|---|---|
| | | ಆರ್ಥಿಕ ಇಲಾಖೆಯ ಸಹಮತಿ ಪಡೆಯಲು ಆರ್ಥಿಕ ಇಲಾಖೆಗೆ ಕಡತವನ್ನು ಸಲ್ಲಿಸಲಾಗಿ, ಆರ್ಥಿಕ ಇಲಾಖೆಯು ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತದೆ.<br><br>"The proposal has been examined. Finance Department agrees to imposing time timit of 30 days as prospposed in amendment to section 30(4) of Karnataka Public Libraries Act 1965. However, Finance Department does not agree to the Proposed amendment wherein in case of non-transfer of library cess within 30 dyas. Finance Department to directly deduct the same from SFC Grants and release it to concerned Library Authorities (proposed section 30(5)."<br><br>ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯ ಮೇರೆಗೆ ಕಡತವನ್ನು ಸಂಸದೀಯ ವ್ಯವಹಾರಗಳ ಇಲಾಖೆಯ ಪರಿಶೀಲನಾ ಸಮಿತಿ ಮುಂದಿಡಲು ಕಡತವನ್ನು ಸಂಸದೀಯ ವ್ಯವಹಾರಗಳ ಇಲಾಖೆಗೆ ಕಡತವನ್ನು ಸಲ್ಲಿಸಲಾಗಿದೆ. |

ಸಂಖ್ಯೆ: ಇಡಿ 32 ಎಲ್‌ಐಬಿ 2021

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು